**ಕರ್ನಾಟಕ ಸರ್ಕಾರ**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**
ಆಯುಕ್ತರ ಕಛೇರಿ, ಗ್ರಾ.ಕು.ನೀ.&ನೈ.ಇ, ೧ನೇ ಮಹಡಿ, "ಇ" ಬ್ಲಾಕ್, ಕೆ.ಹೆಚ್.ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ
ಬೆಂಗಳೂರು-560009, ದೂ:080-22533700, ಫ್ಯಾಕ್ಸ್:22240509, E-mail:krwssd@gmail.com

**ಸಂ:ಗ್ರಾಕುನೀನೈಇ/ಆಡಳಿತ/ಸಿ-1/24/ಕಾ.ಸ/2023** **ದಿನಾಂಕ:11.08.2023**

## ಪತ್ರಿಕಾ ಪ್ರಕಟಣೆ

| ಹುದ್ದೆಯ ಹೆಸರು | ವಿದ್ಯಾರ್ಹತೆ ಮತ್ತು ಅನುಭವ | ಮಾಸಿಕ ಸಂಭಾವನೆ |
|---|---|---|
| ಕಾನೂನು ಸಮಾಲೋಚಕರು (ಹೊರಗುತ್ತಿಗೆ ಆಧಾರದ ಮೇಲೆ) | 1. ಕರ್ನಾಟಕ ರಾಜ್ಯದಿಂದ ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಕಾನೂನು ವಿಷಯದಲ್ಲಿ ಪದವಿ ಹೊಂದಿರಬೇಕು.<br>2. ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ 3 ರಿಂದ 5 ವರ್ಷಗಳ ಅನುಭವ ಹೊಂದಿರಬೇಕು. | ರೂ.35,000/- |

## ಅರ್ಹತಾ ಷರತ್ತುಗಳು

1. **ಹೊರಗುತ್ತಿಗೆ ಅವಧಿ:** ಮೇಲಿನ ಹುದ್ದೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು. ನಂತರ ಕಾಲಕಾಲಕ್ಕೆ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ಅವಶ್ಯಕತೆಯಿದ್ದಲ್ಲಿ ಮುಂದುವರೆಸಲಾಗುವುದು.
2. **ವಯೋಮಿತಿ:** ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 50 ವರ್ಷಗಳು ಮೀರಿರಬಾರದು.
3. ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪರಿಣಿತಿಯನ್ನು ಹೊಂದಿರಬೇಕು.
4. ಇಲಾಖೆಯ ವಿರುದ್ಧ ದಾಖಲಾಗಿರುವ ಎಲ್ಲಾ ವಿಧವಾದ ಪ್ರಕರಣಗಳಿಗೆ (ರಿಟ್ ಅರ್ಜಿ, ನಿಂದನಾ ಅರ್ಜಿ, ಮೇಲ್ಮನವಿ, ಸಿವಿಲ್ ಪ್ರಕರಣ, ಕ್ರಿಮಿನಲ್ ಪ್ರಕರಣ ಇತ್ಯಾದಿ) ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯಗಳಲ್ಲಿ ಕಂಡಿಕೆವಾರು ಉತ್ತರಗಳು, ಆಕ್ಷೇಪಣಾ ಹೇಳಿಕೆಗಳು, ತಕರಾರು ಅರ್ಜಿಗಳನ್ನು ಸಲ್ಲಿಸುವುದು.
5. ನ್ಯಾಯಾಲಯ ಪ್ರಕರಣಗಳನ್ನು ಕಾಲಕಾಲಕ್ಕೆ ಹಿಂಬಾಲಿಸಿ, ತ್ವರಿತವಾಗಿ ಇತ್ಯರ್ಥಪಡಿಸುವುದು.
6. ನ್ಯಾಯಾಲಯ ಪ್ರಕರಣಗಳಲ್ಲಿ ಇಲಾಖೆಗೆ ಕಾನೂನು ಅಭಿಪ್ರಾಯ ನೀಡುವುದು.
7. ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಮಾನ್ಯ ಉಚ್ಚ ನ್ಯಾಯಾಲಯ/ಕರ್ನಾಟಕ ಆಡಳಿತ ನ್ಯಾಯ ಮಂಡಳಿಗಳಲ್ಲಿ ದಾಖಲಿಸಿರುವ ಸೇವಾ ಪ್ರಕರಣಗಳಲ್ಲಿ ಇಲಾಖೆಯ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗುವುದು.
8. ಅಧೀನ ಕಛೇರಿಗಳಲ್ಲಿನ ನ್ಯಾಯಾಲಯ ಪ್ರಕರಣಗಳಲ್ಲಿ ಕಾನೂನು ಅಭಿಪ್ರಾಯ ನೀಡುವುದು.
9. ವಿದ್ಯಾರ್ಹತೆ, ಅನುಭವ ಮತ್ತು ವಯಸ್ಸಿನ ದೃಢೀಕರಣದೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ, ನಿರ್ದೇಶಕರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆ.ಹೆಚ್.ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09 ಇವರಿಗೆ ದಿನಾಂಕ:31.08.2023ರ ಸಾಯಂಕಾಲ 5.30 ಗಂಟೆಯೊಳಗೆ ಸಲ್ಲಿಸತಕ್ಕದ್ದು. ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. (ಅರ್ಜಿಯ ನಮೂನೆಯು swachhamevajayate.org ಜಾಲತಾಣದಲ್ಲಿ ಲಭ್ಯವಿರುತ್ತದೆ.)

ಸಹಿ/-
ನಿರ್ದೇಶಕರು
ಗ್ರಾ.ಕು.ನೀ.&ನೈ. ಇಲಾಖೆ,
ಬೆಂಗಳೂರು.